

بسم اللهِ الرّحمٰن الرّحيم

# ಆಯಾ ಕಾಲದ ಖಲೀಫರ ಖುತ್‌ಬ ಆಲಿಸಬೇಕಾದುದು ಪ್ರತಿಯೊಬ್ಬ ಅಹ್ಮದಿಯ ಅನಿವಾರ್ಯ ಕರ್ತವ್ಯ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಹಾಲೆಂಡ್‌ನ **'ಮಸ್ಜಿದ್ ಬೈತುನ್ನೂರ್'** ನಲ್ಲಿ **09–10–2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಲ್ಲಿ ಹಾಲೆಂಡಿನಲ್ಲಿರುವ ಅಹ್ಮದಿಯರಲ್ಲಿ ಬಹುತೇಕ ಜನರು ಅಹ್ಮದಿಯರ ಸಂತತಿಗಳಾಗಿದ್ದಾರೆ. ಅಥವಾ ಅವರ ಮನೆಗಳಿಗೆ ಅವರು ಬಹಳ ಚಿಕ್ಕವರಾಗಿರುವಾಗಲೇ ಅಹ್ಮದಿಯ್ಯತ್ ಪ್ರವೇಶಿಸಿ ಅವರು ಅಹ್ಮದಿಯರ ಪರಿಸರದಲ್ಲಿ ಬೆಳೆದವರಾಗಿದ್ದಾರೆ. ಅವರ ಪೈಕಿ ಬಹುಪಾಲು ಜನರು ಪಾಕಿಸ್ಥಾನದಿಂದ ವಲಸೆ ಬಂದವರಾಗಿದ್ದಾರೆ. ನಿಮಗೆ ಇಲ್ಲಿಗೆ ಬಂದು ನೆಲೆಸಲು ಅಥವಾ ಈ ದೇಶದ ನಾಗರಿಕರಾಗಲು ಅನುಮತಿ ದೊರೆತದ್ದು ಏಕೆಂದರೆ, ಪಾಕಿಸ್ತಾನದಲ್ಲಿ ನಮಗೆ ನಮ್ಮ ಧಾರ್ಮಿಕ ವಿಶ್ವಾಸ ಪ್ರಕಾರ, ಎಂದರೆ ಇಸ್ಲಾಮ್ ಪ್ರಕಾರ ಅನುಷ್ಠಾನ ಕರ್ಮಗಳನ್ನು ಮಾಡಲು ಅನುಮತಿ ಮತ್ತು ಸ್ವಾತಂತ್ರ್ಯ ಇಲ್ಲ ಎಂದು ನೀವು ಇಲ್ಲಿಗೆ ಬಂದು ಹೇಳಿದಿರಿ. ಕೆಲವರ ವಿರುದ್ಧ ಪಾಕಿಸ್ತಾನದಲ್ಲಿ ಮೊಕದ್ದಮೆಗಳೂ ದಾಖಲಾಗಿರಬಹುದು. ಒಟ್ಟಿನಲ್ಲಿ ನೀವು ನಿಮ್ಮನ್ನು ಅಹ್ಮದಿಯರೆಂದು ಹೇಳುತ್ತಿರುವ ಕಾರಣ ನಿಮ್ಮ ಮೇಲೆ ಇಲ್ಲಿನ ಸರಕಾರ ದಯೆದೋರಿತು. ನೀವು ನಿಮ್ಮನ್ನು ಅಹ್ಮದಿಯರು ಎಂದು ಘೋಷಿಸುವಾಗ ನಿಮ್ಮ ಮೇಲೆ ಕೆಲವು ಹೊಣೆಗಾರಿಕೆಗಳು ಸಹ ಹೇರಲ್ಪಡುತ್ತವೆ. ಕೆಲವು ಅಹ್ಮದಿಯರು ತಮ್ಮ ವಿದ್ಯಾರ್ಹತೆ ಕಾರಣ ಮತ್ತು ತಮ್ಮ ಪರಿಣತಿಯ ಕಾರಣ ಇಲ್ಲಿಗೆ ಬಂದು ತಮ್ಮ ವಿದ್ಯಾರ್ಹತೆ ಮತ್ತು ಪರಿಣತಿಯನ್ನು ವರ್ಧಿಸಲು ಸಂದರ್ಭ ಸಿಗಲೆಂದು ಆಶಿಸುವವರೂ ಆಗಿದ್ದಾರೆ. ಅವರು ಸಹ ತಮ್ಮನ್ನು ತಾವು ಅಹ್ಮದಿಯರೆಂದು ಹೇಳುವವರಾದ ಕಾರಣ ಅವರು ಸಹ ಈ ಹೊಣೆಗಾರಿಕೆಗಳಿಗೆ ಹೊರತಾಗಿಲ್ಲ. ಅದೇ ರೀತಿ ಹೊಸದಾಗಿ ಬೈಅತ್ ಮಾಡಿ ಅಹ್ಮದಿಯಾ ಜಮಾಅತ್‌ಗೆ ಸೇರುವವರಿದ್ದಾರೆ. ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದಗಳ ಸತ್ಯತೆ ಬಗ್ಗೆ ದೃಢ ವಿಶ್ವಾಸ ಇರುವುದರಿಂದ ಅವರು ಈ ಜಮಾಅತಿಗೆ ಸೇರಿದ್ದಾರೆ. ಅಂತಹ ಜನರ ಮೇಲೆ ಸಹ ಬೈಅತ್ ಪ್ರತಿಜ್ಞೆಗಳನ್ನು ಈಡೇರಿಸುವ ಹೊಣೆಗಾರಿಕೆಗಳಿವೆ. ಅಂತಹ ಜನರು, ಅಹ್ಮದಿಯರಾಗಿ ಜನಿಸಿದವರ ಅಥವಾ ಹಳೆಯ ಅಹ್ಮದಿಯರ ವರ್ತನೆಗಳನ್ನು ನೋಡಿ ಅದರ ಪ್ರಕಾರ ನಾವು ವರ್ತಿಸುತ್ತಿದ್ದೇವೆ ಎಂದು ನೆವನ ಹೇಳಿ ತಮ್ಮ ಹೊಣೆಗಾರಿಕೆಗಳಿಂದ ಮುಕ್ತರಾಗಲು ಸಾಧ್ಯವಿಲ್ಲ.

ಈ ಕಾಲಘಟ್ಟದಲ್ಲಿ ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆನುಡಿಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನೀಡಿದ ವ್ಯಾಖ್ಯಾನಗಳನ್ನು ಮತ್ತು ಅವರ ಗ್ರಂಥಗಳನ್ನು ಓದಿ ಅರ್ಥಮಾಡಿಕೊಳ್ಳುವುದು ನಮ್ಮ ತರ್‌ಬಿಯತಿಗಾಗಿ ಆವಶ್ಯಕವಾಗಿದೆ. ಅವುಗಳೆಲ್ಲಾ ನಮಗೆ ನೋಡಲು ಮತ್ತು ಓದಲು ಲಭ್ಯವಿದೆ. ಆದುದರಿಂದ ಯಾರಿಗೂ ನೆವನ ಹೇಳಲು ಸಾಧ್ಯವಿಲ್ಲ. ನಾನು ಹಳೆಯ ಅಹ್ಮದಿಯರೊಂದಿಗೆ ಹೇಳಲು ಬಯಸುತ್ತೇನೆ: ನಿಮ್ಮ ತಪ್ಪುಗಳನ್ನು ನೋಡಿ ಯಾರಿಗಾದರೂ ತಪ್ಪು ಗ್ರಹಿಕೆಯಾಗಿದ್ದರೆ ನೀವು ಆ ತಪ್ಪಿಗೆ ಮತ್ತು ಪಾಪದೋಷಕ್ಕೆ ನಿಶ್ಚಯವಾಗಿಯೂ ಭಾಗಿದಾರರಾಗುವಿರಿ. ಹಳೆಯ ಅಹ್ಮದಿಯರಿಗೆ ಅಲ್ಲಾಹನು ಇಲ್ಲಿ ಅನುಗ್ರಹ ನೀಡಿದನು. ಅವರ ತಂದೆ ಅಥವಾ ತಾತ ಅಹ್ಮದಿಯರಾಗಿದ್ದರು ಅಥವಾ ಅವರಿಗೆ ಬಾಲ್ಯದಲ್ಲೇ ಅಹ್ಮದಿಯ್ಯತ್ ಲಭಿಸಿತು. ಅಲ್ಲಾಹನ ಅನುಗ್ರಹದಿಂದ ಅವರು ಇಲ್ಲಿಗೆ ಬಂದಾಗ ಅವರಿಗೆ ಉತ್ತಮ ಆರ್ಥಿಕ ಸ್ಥಿತಿ ಉಂಟಾಯಿತು. ಅಂತಹ ಜನರು ತಾವು ಅಹ್ಮದಿಯಾ ಜಮಾಅತಿನ ಉಪಕಾರಗಳಿಗೆ ಅಧೀನರು ಎಂಬುದನ್ನು ಮರೆತು ಬಿಡಬಾರದು. ಅವರು ಅದಕ್ಕೆ ಕೃತಜ್ಞತೆ ಅರ್ಪಿಸುತ್ತಾ ತಮ್ಮ ಸ್ಥಿತಿಗತಿಗಳಲ್ಲಿ ಅಸಾಮಾನ್ಯ ಪರಿಶುದ್ಧ ಬದಲಾವಣೆ ಉಂಟುಮಾಡಲು ಪ್ರಯತ್ನಿಸಬೇಕು. ತಮಗೆ ಅಲ್ಲಾಹನ ಈ ಜಮಾಅತ್‌ಗೆ ಸೇರಿದ ಕಾರಣ ಲಭಿಸಿದ ಉಪಕಾರಗಳ ಬಗ್ಗೆ ತಮ್ಮ ಮಕ್ಕಳಿಗೆ ಸಹ ಹೇಳುತ್ತಾ ಇರಬೇಕಾದುದು ಆವಶ್ಯಕವಾಗಿದೆ. ಅದೇ ರೀತಿ ಪ್ರತಿಯೊಬ್ಬ ಅಹ್ಮದಿ ತನ್ನನ್ನು ಅಹ್ಮದಿಯ್ಯತ್‌ಗೆ ಸಂಬಂಧಿಸಿದವನು ಎಂದು ಹೇಳುವಾಗ ಅವನು ಅಹ್ಮದಿಯಾ ಜಮಾಅತಿನ ನಿಝಾಮ್‌ನೊಂದಿಗೆ ಬಲಿಷ್ಠವಾದ ಸಂಬಂಧ ಸ್ಥಾಪಿಸಬೇಕು. ಖಿಲಾಫತೆ ಅಹ್ಮದಿಯಾದೊಂದಿಗೆ ನಿಷ್ಠೆ ಮತ್ತು ಅನುಸರಣೆಯ ಸಂಬಂಧ ಅವನು ಸ್ಥಾಪಿಸುವುದು ಕಡ್ಡಾಯ (ಫರ್ಝ್) ಆಗಿದೆ. ಏಕೆಂದರೆ ಪ್ರತಿಯೊಬ್ಬನೂ ಬೈಅತ್ ಮಾಡುವಾಗ ಹೀಗೆಯೇ ಪ್ರತಿಜ್ಞೆ ಮಾಡಿದ್ದನು. ಅಲ್ಲಾಹನ ಅನುಗ್ರಹದಿಂದ ಹೊಸದಾಗಿ ಬೈಅತ್ ಮಾಡುವವರು ಮತ್ತು ವಿಶಿಷ್ಟವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದಗಳನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡು ಬೈಅತ್ ಮಾಡಿದವರು ಬೈಅತ್ ಪ್ರತಿಜ್ಞೆ ಮತ್ತು ಅದರ ಶರತ್ತುಗಳ ಬಗ್ಗೆ ಚಿಂತಿಸುತ್ತಾ ಇರುತ್ತಾರೆ. ಬಹಳ ಜನರು ನನಗೆ ಅವುಗಳ ಬಗ್ಗೆ ಪತ್ರಗಳನ್ನು ಸಹ ಬರೆಯುತ್ತಾರೆ. ಆದರೆ ಅಹ್ಮದಿಯಾಗಿ ಜನಿಸಿದವರು ಅಥವಾ ಅವರ ಬಾಲ್ಯಕಾಲದಲ್ಲಿ ಅವರ ತಂದೆ ತಾಯಂದಿರು ಅಹ್ಮದಿಯರಾದವರು ಇಲ್ಲಿಗೆ ಬಂದು ಲೌಕಿಕ ವ್ಯವಹಾರಗಳಲ್ಲಿ ಹೆಚ್ಚು ಮಗ್ನರಾಗಿ ಇರುವುದಾಗಿ ಕಂಡು ಬರುತ್ತದೆ. ಅವರು ಬೈಅತ್ ಶರತ್ತುಗಳ ಬಗ್ಗೆ ಯೋಚಿಸುವುದಿಲ್ಲ ಮತ್ತು ಪ್ರತಿಜ್ಞೆಯನ್ನು ಮನವರಿಕೆ ಮಾಡಿಕೊಳ್ಳುವುದೂ ಇಲ್ಲ. ಅಹ್ಮದಿಯತ್ತಿನ ಕಾರಣದಿಂದ ಅವರಿಗೆ ದೊರೆತ ಅನುಗ್ರಹಗಳ ಬಗ್ಗೆ ಅವರು ನೆನಪಿಸುವುದಿಲ್ಲ. ಈಗ ಎಲ್ಲ ಸ್ಥಳಗಳಲ್ಲಿಯೂ ಎಂ.ಟಿ.ಎ. ಮೂಲಕ ಬೈಅತ್ ಮಾಡುವ ವಿಧಾನ ನೋಡಬಹುದಾಗಿದೆ ಮತ್ತು ಆಲಿಸಬಹುದಾಗಿದೆ. ಹೀಗಿದ್ದರೂ ಬೈಅತ್ ಬಗ್ಗೆ ಶ್ರದ್ಧೆ ನೀಡಿ ಬೈಅತ್ ವಾಸ್ತವಿಕತೆಯನ್ನು ತಿಳಿದುಕೊಂಡು ಅದರ ಶರತ್ತುಗಳ ಪ್ರಕಾರ

ಅನುಷ್ಠಾನ ಕರ್ಮಗಳನ್ನು ಮಾಡಲು ಕೆಲವರು ಪ್ರಯತ್ನ ಮಾಡುವುದಿಲ್ಲ. ಇದೇ ರೀತಿ ಖಿಲಾಫತ್‌ನೊಂದಿಗೆ ಯಾವ ರೀತಿಯ ಸಂಬಂಧ ಜೋಡಿಸಬೇಕೋ ಆ ರೀತಿ ಸಂಬಂಧ ಜೋಡಿಸಲು ಅವರು ಪ್ರಯತ್ನ ಮಾಡುವುದೂ ಇಲ್ಲ.

ಆದುದರಿಂದ ಪ್ರತಿಯೊಬ್ಬನು ತನ್ನನ್ನು ಪರಿಶೋಧಿಸ ಬೇಕು. ತಾನು ಎಲ್ಲಿ ನಿಂತಿದ್ದೇನೆಂದು ಆಗ ಅವನಿಗೆ ಸ್ವತಃ ತಿಳಿಯುವುದು. ಈಗ ನಾನು ಬೈಅತ್‌ನ ಕೇವಲ ಒಂದು ಶರತ್ತನ್ನು ನಿಮ್ಮ ಮುಂದಿರಿಸುತ್ತೇನೆ. ನೀವು ಆ ಶರತ್ತನ್ನು ಮೇಲಿಂದ ಮೇಲೆ ನೋಡದೆ ಅದರ ಬಗ್ಗೆ ಆಳವಾಗಿ ಚಿಂತಿಸಿರಿ. ಅನಂತರ ನಿಮ್ಮ ವರ್ತನೆಯನ್ನು ಪರಿಶೋಧಿಸಿರಿ. ಆಗ ನಿಮಗೆ 'ನಾವು ಈ ಶರತ್ತನ್ನು ಪಾಲಿಸುತ್ತಿದ್ದೇವೆ' ಎಂಬ ಉತ್ತರ ಸಿಗುವುದಾದರೆ ನೀವು ಅದೃಷ್ಟಶಾಲಿಗಳಾ ಗಿರುವಿರಿ. ಅಂತಹ ಜನರು ಅಲ್ಲಾಹನ ಅನುಗ್ರಹಗಳನ್ನು ಬಾಚಿಕೊಳ್ಳುವವರಾಗುವರು. ಆದರೆ ನೀವು ಈ ವಿಷಯದಲ್ಲಿ ಬಲಹೀನರಾಗಿದ್ದರೆ ನೀವು ನಿಮ್ಮನ್ನು ಸುಧಾರಣೆ ಮಾಡಲು ಪ್ರಯತ್ನ ಮಾಡಬೇಕಾದ ಆವಶ್ಯಕತೆಯಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬೈಅತ್ ಶರತ್ತು ಗಳಲ್ಲಿ ಹತ್ತನೆಯ ಶರತ್ತಾಗಿ ಹೀಗೆ ಹೇಳಿದರು: ಬೈಅತ್ ಮಾಡುವವನು ಈ ವಿನೀತನೊಂದಿಗೆ ಅಲ್ಲಾಹನಿಗೋಸ್ಕರ ಎಂತಹ ಭ್ರಾತೃಸಂಬಂಧ ಹೊಂದಬೇಕೆಂದರೆ ನನ್ನನ್ನು ಒಳ್ಳೆಯ ವಿಷಯಗಳಲ್ಲಿ ತನ್ನ ಮರಣದ ತನಕ ಅನುಸರಿಸು ವುದಾಗಿ ಪ್ರತಿಜ್ಞೆ ಮಾಡಬೇಕು. ಈ ಭ್ರಾತೃಸಂಬಂಧ ಲೌಕಿಕ ಸಂಬಂಧಗಳಲ್ಲಿ ಮತ್ತು ಎಲ್ಲ ರೀತಿಯ ಸೇವಾ ಸ್ಥಿತಿಗಳಲ್ಲೂ ಕಾಣದಿರುವಂತಹದೂ ಶ್ರೇಷ್ಠವೂ ಆಗಿರಬೇಕು.

ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ನಿಸ್ವಾರ್ಥವೂ ಅತ್ಯಂತ ಪ್ರೇಮ ಭರಿತವೂ ಆಗಿರುವ ಸಂಬಂಧ ಸ್ಥಾಪಿಸಬೇಕೆಂಬ ಹೊಣೆಗಾರಿ ಕೆಯನ್ನು ಮೇಲೆ ಉಲ್ಲೇಖಿಸಿದ ಶರತ್ತು ನಮ್ಮ ಮೇಲೆ ಹೊರಿಸುತ್ತದೆ. ಅವರು ನಮ್ಮಿಂದ ಪ್ರತಿಜ್ಞೆ ಪಡೆದುಕೊಂಡಿ ದ್ದಾರೆ. ಆ ಪ್ರತಿಜ್ಞೆ ಏನು? ಅಲ್ಲಾಹನಿಗೋಸ್ಕರ ನನ್ನೊಂದಿಗೆ ಪ್ರೀತಿಯ ಸಂಬಂಧ ಸ್ಥಾಪಿಸಿರಿ. ಮತ್ತು ಸಾಹೋದರ್ಯದ ಉನ್ನತ ಮಟ್ಟ ಸ್ಥಾಪಿಸಿರಿ ಎಂಬುದೇ ಆ ಪ್ರತಿಜ್ಞೆ. ಅವರ ಎಲ್ಲ ಒಳ್ಳೆಯ ತೀರ್ಮಾನಗಳನ್ನು ಅಂಗೀಕರಿಸುವೆವು ಎಂದು ಅವರು ಪ್ರತಿಜ್ಞೆ ಮಾಡಿಸಿದ್ದಾರೆ. ಎಂದರೆ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಯಾವ ಉದ್ದೇಶಕ್ಕಾಗಿ ನಿಯೋಜಿಸಿರುವನೋ ಆ ಉದ್ದೇಶ ಗಳನ್ನು ನಾವು ಈಡೇರಿಸಬೇಕಾಗಿದೆ. ಇಸ್ಲಾಮ್ ಧರ್ಮದ ತತ್ವಗಳ ಪ್ರಕಾರ ಅವರು ನಮಗೆ ನೀಡಿದ ಮಾರ್ಗದರ್ಶ ನಗಳನ್ನು ನಾವು ಅಂಗೀಕರಿಸಬೇಕು. ಅವುಗಳನ್ನು ಪರಿಪೂ ರ್ಣವಾಗಿ ಅನುಸರಿಸಬೇಕು. ಮತ್ತು ನಾವು ಮೃತರಾಗುವ ತನಕ ಅವುಗಳನ್ನು ಪಾಲಿಸಲು ಪ್ರಯತ್ನಿಸುತ್ತಾ ಇರಬೇಕು. ಹಾಗೆ ಮಾಡುವೆವು ಎಂದು ನಾವು ಪ್ರತಿಜ್ಞೆ ಮಾಡಿರುವೆವು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ನಾವು ಸ್ಥಾಪಿಸುವ ಸಂಬಂಧ ಎಷ್ಟು ಉನ್ನತ ಮಟ್ಟದ್ದಾಗಿರಬೇ ಕೆಂದರೆ ಅದು ಕುಟುಂಬ ಸಂಬಂಧಗಳಲ್ಲೂ ಇತರ ಲೌಕಿಕ ಸಂಬಂಧಗಳಲ್ಲೂ ಕಾಣಿಸುವ ಉದಾಹರಣೆಗಳಿಗಿಂತ ಉನ್ನತ ಮಟ್ಟದ್ದೂ ಅಪ್ರತಿಮವೂ ಆಗಿರಬೇಕು. ನಿಷ್ಠೆಯಿಂದ ಸೇವೆ ಮಾಡುವ ಸ್ಥಿತಿಯಲ್ಲಿ ಕಾಣಿಸುವ ಸಂಬಂಧಕ್ಕಿಂತಲೂ ಅದು ಉನ್ನತ ಮಟ್ಟದ್ದಾಗಿರಬೇಕು. ಒಬ್ಬನು ತನಗೆ ಮಾಡಿದ ಔದಾ ರ್ಯದ ಕಾರಣದಿಂದ ಅವನಿಗೆ ಅಧೀನವಾಗಿ ವರ್ತಿಸುವವನ ಸಂಬಂಧ ಹೇಗಿದೆಯೋ ಅದಕ್ಕಿಂತಲೂ ಅದು ಉನ್ನತ ಮಟ್ಟದ್ದಾಗಿರಬೇಕು. ನಮ್ಮ ಸಂಬಂಧ ಈ ಲೋಕದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ ರನ್ನು ಪ್ರೀತಿಸುವ ಉನ್ನತ ಮಟ್ಟ ಸ್ಥಾಪಿಸಿದ ನಂತರ ಸ್ಥಾನ ನೀಡಬೇಕಾದುದು ಅವರ ಸತ್ಯಸಂಧ ದಾಸರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಆಗಿರುತ್ತದೆ. ನಾವು ಇಂತಹ ಮಟ್ಟವನ್ನು ಸ್ಥಾಪಿಸಲು ಪ್ರಯತ್ನಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದ ನಂತರ ಅವರೊಂದಿಗೆ ಎಂತಹ ಸಂಬಂಧ ಸ್ಥಾಪಿಸಬೇಕು ಎನ್ನುವುದರ ಬಗ್ಗೆ ಪ್ರತಿಯೊಬ್ಬ ಅಹ್ಮದಿ ಮೇಲೆ ಪ್ರಸ್ತಾಪಿಸಿದ ಉಲ್ಲೇಖದ ಬೆಳಕಿನಲ್ಲಿ ಸ್ವತಃ ತನ್ನನ್ನು ಪರಿಶೋಧಿಸಬಹುದಾಗಿದೆ. ಏನು ನಾವು ಆ ಮಟ್ಟವನ್ನು ತಲಪಿದ್ದೇವೆಯೋ ಅಥವಾ ಲೌಕಿಕ, ಸಂಬಂಧಗಳಿಗೋಸ್ಕರ, ಲೌಕಿಕ ಲಾಭಗಳಿಗೋಸ್ಕರ, ನಾವು ಇವುಗಳನ್ನು ಮರೆತು ಬಿಡುತ್ತೇವೆಯೋ? ಎಂದು ಪರಿಶೀಲಿಸಬೇಕು. ಲೌಕಿಕ ಉದ್ದೇಶಗಳು ಮತ್ತು ಲೌಕಿಕ ಸಂಬಂಧಗಳು ಪ್ರೀತಿ ಮತ್ತು ಅನುಸರಣೆಯ ಈ ಸಂಬಂಧದ ಮೇಲೆ ಆವರಿಸುತ್ತದೆಯೋ ಎಂದು ನೋಡಬೇಕು. ಧರ್ಮದ ಬಗ್ಗೆ ಸರಿಯಾದ ಪ್ರಜ್ಞೆ ಹೊಂದಿದ್ದರೆ ಧರ್ಮಕ್ಕೆ ಸಂಬಂಧಿಸಿದ ಕೆಲಸಗಳನ್ನು ಮನುಷ್ಯನು ಪ್ರೀತಿ ಮತ್ತು ನಿಷ್ಠೆಯ ಭಾವನೆ ಹೊಂದಿ ಮಾಡುವನು. ಹಝ್ರತ್ ಮಸೀಹ್ ಮೌಊದ್ ಅಲೈಹಿ ಸ್ಸಲಾಮ್ ಪ್ರತೀಕ್ಷಿಸುವುದೇನೆಂದರೆ ನೀವು ಬೈಅತ್ ಮಾಡಿದ ನಂತರ ಈ ಭಾವನೆಯನ್ನು ವರ್ಧಿಸಬೇಕೆಂದು. ಎಲ್ಲಿಯವ ರೆಗೆ ಅನುಸರಣೆ ಮತ್ತು ನಿಷ್ಠೆಯ ಈ ಸಂಬಂಧ ಸ್ಥಾಪನೆ ಯಾಗುವುದಿಲ್ಲವೋ ಅಂತಹ ಜನರಿಗೆ ನೀಡಲಾಗುವ ಉಪ ದೇಶಗಳು ಪ್ರಭಾವ ಬೀರಲಾರವು. ಅವುಗಳ ಪ್ರಕಾರ ಕರ್ಮ ಗಳನ್ನು ಮಾಡಲು ಅವನು ಪ್ರಯತ್ನ ಮಾಡಲಾರದು. ಆದು ದರಿಂದ ನೀವು ಹಝ್ರತ್ ಮಸೀಹ್ ಮೌಊದ್ ಅಲೈಹಿ ಸ್ಸಲಾಮರ ಉಪದೇಶಗಳನ್ನು ಅನುಸರಿಸಲು ಇಚ್ಛಿಸುವು ದಾದರೆ ನೀವು ನಿಮ್ಮ ಬೈಅತ್ ಶರತ್ತುಗಳನ್ನು ಈಡೇರಿಸಲು ಬಯಸುವುದಾದರೆ ನೀವು ಅನುಸರಣೆ ನಿಷ್ಠೆ ಮತ್ತು ಪ್ರಮಾಣಿಕತೆಯ ಮಟ್ಟವನ್ನು ವರ್ಧಿಸುವುದು ಆವಶ್ಯಕ ವಾಗಿದೆ. ಪ್ರತಿಯೊಬ್ಬ ಅಹ್ಮದಿ ಮನವರಿಕೆ ಮಾಡಿಕೊಳ್ಳಬೇ ಕಾದುದೇನೆಂದರೆ ಒಳ್ಳೆಯ ಅನುಸರಣೆ ಎಂದರೆ ಪ್ರೀತಿ ಮತ್ತು ನಿಷ್ಠೆಯನ್ನು ಉನ್ನತ ಮಟ್ಟಕ್ಕೇರಿಸಿ ಪರಿಪೂರ್ಣವಾಗಿ ಅನುಸರಿಸುವುದಾಗಿದೆ. ಪರಿಪೂರ್ಣ ಅನುಸರಣೆ ಸಾಧ್ಯವಾಗು ವುದು ಯಾರನ್ನು ನಾವು ಅನುಸರಣೆ ಮಾಡಲು ಬಯಸು ತ್ತೇವೋ ಅವರ ಪ್ರತಿಯೊಂದು ಆಜ್ಞೆಯನ್ನು ಕಂಡುಕೊಳ್ಳಲು ಪ್ರಯತ್ನಿಸಬೇಕು ಮತ್ತು ಅವುಗಳನ್ನು ಪಾಲಿಸಬೇಕು. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸ ಲಾಮ್ ನಮ್ಮಿಂದ ಏನನ್ನು ಪ್ರತೀಕ್ಷಿಸುತ್ತಾರೆ ಅವರು ಏನೆಲ್ಲಾ ಆಜ್ಞಾಪಿಸಿದ್ದಾರೆ ಅವುಗಳನ್ನು ಕಂಡುಹಿಡಿದು ಅವು ಗಳ ಪ್ರಕಾರ ಕೆಲಸ ಮಾಡಲು ಪ್ರಯತ್ನಿಸಬೇಕು. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು

ಅನುಸರಿಸುತ್ತೇವೆ ಎಂದು ಬಾಯಿಯಲ್ಲಿ ವಾದಿಸಿದರೆ ಸಾಕಾಗದು. ಅವರು ನೀಡಿದ ಉಪದೇಶಗಳ ಬಗ್ಗೆ ತಿಳಿದೇ ಇಲ್ಲದಿರುವಾಗ ಅವರನ್ನು ಅನುಸರಿಸುವುದಾದರೂ ಹೇಗೆ? ಆದುದರಿಂದ ಅಹ್ಮದಿ ಆಗಿರುವವನು ತನ್ನ ಅರಿವನ್ನು ವರ್ಧಿಸಬೇಕಾದುದು ಆವಶ್ಯಕವಾಗಿದೆ. ಅಲ್ಲಾಹನಿಗೋಸ್ಕರ ಯಾವ ಸಂಬಂಧವನ್ನು ಸ್ಥಾಪಿಸಲಾಗಿದೆಯೋ ಅದನ್ನು ಅಲ್ಲಾಹನ ಸಂಪ್ರೀತಿ ಗಳಿಸಲು ವರ್ಧಿಸಬೇಕು ಮತ್ತು ನಿಷ್ಠೆಯಿಂದ ಆ ಉಪದೇಶಗಳ ಪ್ರಕಾರ ಜೀವಿಸಬೇಕು.

ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನೀಡಿದ ಉಪದೇಶಗಳು ಮತ್ತು ಅವರು ಅಹ್ಮದಿಯಾ ಜಮಾಅತಿನ ಸದಸ್ಯರಿಂದ ಏನನ್ನು ಪ್ರತೀಕ್ಷಿಸುತ್ತಿದ್ದರು ಎನ್ನುವುದು ಅವರ ವಿವಿಧ ಗ್ರಂಥಗಳಲ್ಲಿ ಮತ್ತು ಅವರ ನುಡಿಗಳ ಸಂಗ್ರಹಗಳಲ್ಲಿವೆ. ಅವುಗಳಲ್ಲಿ ಕೆಲವೊಂದನ್ನು ಈಗ ನಾನು ನಿಮ್ಮ ಮುಂದೆ ಇರಿಸುತ್ತೇನೆ.

ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನಮ್ಮ ಜಮಾಅತ್‌ನ ಜನರು ಹೇಗಿರಬೇಕೆಂದರೆ ಅವರು ಕೇವಲ ಮಾತನಾಡುವವರು ಮಾತ್ರ ಆಗಬಾರದು. ಅವರು ಬೈಅತನ್ನು ಸತ್ಯವಾದ ನಿರ್ಧಾರದಿಂದ ಈಡೇರಿಸುವವರಾಗಬೇಕು. ನೀವು ಆಂತರಿಕ ಬದಲಾವಣೆ ಉಂಟುಮಾಡಬೇಕು. ನೀವು ಕೇವಲ ಧಾರ್ಮಿಕ ವಿಚಾರಗಳನ್ನು ಅರಿತುಕೊಳ್ಳುವುದರ ಮೂಲಕ ಅಲ್ಲಾಹನನ್ನು ಸಂತೋಷಪಡಿಸಲಾರಿರಿ. ನಿಮ್ಮಲ್ಲಿ ಆಂತರಿಕ ಬದಲಾವಣೆ ಆಗಿರದಿದ್ದರೆ ನಿಮಗೆ ಮತ್ತು ಅನ್ಯರಿಗೆ ಯಾವುದೇ ವ್ಯತ್ಯಾಸವಿರಲಾರದು. ಪ್ರತಿಯೊಬ್ಬನು ತನ್ನ ಭಾರ ತಾನೇ ಹೊರಬೇಕು ಮತ್ತು ತನ್ನ ವಾಗ್ದಾನಗಳನ್ನು ನೆರವೇರಿಸಬೇಕು.

ವಿಶ್ವಾಸದ ದೃಷ್ಟಿಯಲ್ಲಿ ತನ್ನನ್ನು ಸರಿಯಾಗಿರಿಸುವುದು ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿ ಅವರ ಸತ್ಯವನ್ನು ನಂಬುವುದು, ವಾದ ಪ್ರತಿವಾದಗಳಲ್ಲಿ ಅನ್ಯರ ಬಾಯಿ ಮುಚ್ಚಿಸುವುದು ಇವು ಯಾವುದೂ ನೀವು ನಿಮ್ಮ ಕರ್ಮಗಳಲ್ಲಿ ಉತ್ತಮ ಬದಲಾವಣೆ ಮಾಡುವುದಿಲ್ಲವಾದರೆ ಯಾವ ಪ್ರಯೋಜನಕ್ಕೂ ಬರಲಾರದು.

ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ನಿಮ್ಮ ಆತ್ಮದ ಪರಿಷ್ಕರಣೆಗೋಸ್ಕರ ಪ್ರಯತ್ನಿಸಿರಿ. ನಮಾಝ್‌ಗಳಲ್ಲಿ ದುಆ ಮಾಡಿರಿ. ಧಾನಧರ್ಮಗಳನ್ನು ಮಾಡಿರಿ. ಅಲ್ಲಾಹನು ಹೇಳಿದ– **ವಲ್ಲಝೀನ ಜಾಹದೂ ಫೀನಾ** ನಮ್ಮ ಮಾರ್ಗದಲ್ಲಿ ಯಾರು ಅತ್ಯಂತ ಪ್ರಯತ್ನ ಪಡುತ್ತಾರೋ, ಎಂದು ಯಾರ ಬಗ್ಗೆ ಹೇಳಿರುವನೋ ಅವರೊಂದಿಗೆ ಸೇರುವವರಾಗಿರಿ. ಅಂತಹ ಜನರ ಬಗ್ಗೆ ಅಲ್ಲಾಹನು ಹೀಗೆ ಹೇಳಿದ್ದಾನೆ– **ಲನಹ್‌ದಿಯನ್ನಹುಮ್ ಸುಬುಲನಾ.** ಖಂಡಿತವಾಗಿಯೂ ನಾವು ಅವರನ್ನು ನಮ್ಮ ಪಥದಲ್ಲಿ ನಡೆಸುವೆವು.

ಇದನ್ನು ಇನ್ನಷ್ಟು ವಿಶದೀಕರಿಸಿ ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇನ್ನೊಂದೆಡೆ ಹೀಗೆ ಹೇಳುತ್ತಾರೆ: ತೀರಾ ನಿರ್ಲಕ್ಷ್ಯತೆಯಿಂದ ವರ್ತಿಸುತ್ತಿರುವ ಓರ್ವನಿಗೆ, ಅಲ್ಲಾಹನನ್ನು ಸುಜ್ಞಾನದಿಂದಲೂ ಪೂರ್ಣ ನಿಷ್ಠೆಯಿಂದಲೂ ಅನ್ವೇಷಿಸುವವನಿಗೆ ದೊರಕುವಂತಹ ಅನುಗ್ರಹ ಹೇಗೆ ತಾನೆ ದೊರಕಲು ಸಾಧ್ಯ?

ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನನ್ನನ್ನು ನಂಬಿರಿ. ನನ್ನನ್ನು ಹಿಂಬಾಲಿಸಿರಿ. ನನ್ನನ್ನು ಅನುಸರಿಸಿರಿ. ಏಕೆಂದರೆ ಅಲ್ಲಾಹನನ್ನು ಹುಡುಕುವ ಮಾರ್ಗಗಳನ್ನು ನಾವು ತೋರಿಸುವೆವು ನೀವು ಅಲ್ಲಾಹನ ಸಾನಿಧ್ಯ ಗಳಿಸಿ ಅವನ ಅನುಗ್ರಹ ಹೇಗೆ ಪಡೆಯಬಹುದೆಂದು ನಾವು ತೋರಿಸಿ ಕೊಡುವೆವು. ನೀವು ನಿಮ್ಮ ನಮಾಝ್‌ಗಳನ್ನು ಸರಿಯಾದ ರೀತಿಯಲ್ಲಿ ಅನುಷ್ಠಿಸಿರಿ. ಸಮಯಕ್ಕೆ ಸರಿಯಾಗಿ ಅನುಷ್ಠಿಸಿರಿ. ಅಲ್ಲಾಹನ ಪ್ರೀತಿ ಗಳಿಸಲು ದಾನಧರ್ಮ ನೀಡುವ ಬಗ್ಗೆ ಗಮನ ಹರಿಸಿರಿ. ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ನಮ್ಮ ಸಂಬಂಧ ಅಲ್ಲಾಹನೊಂದಿಗೆ ನಮ್ಮ ಸಂಬಂಧವನ್ನು ವರ್ಧಿಸುವುದಾಗಲಿ.

ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಂತರ ಅಲ್ಲಾಹನು ಖಿಲಾಫತ್ ವ್ಯವಸ್ಥೆಯನ್ನು ನಮ್ಮ ಜಮಾಅತಿನಲ್ಲಿ ಸ್ಥಾಪಿಸಿದ್ದಾನೆ. ಖಿಲಾಫತ್ ವ್ಯವಸ್ಥೆ, ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನು ವಹಿಸಿಕೊಟ್ಟ ಕೆಲಸವನ್ನು ಮುಂದುವರಿಸಬೇಕಾಗಿರುತ್ತದೆ. ಈ ಕಾರಣದಿಂದ ಖಿಲಾಫತ್ ವ್ಯವಸ್ಥೆಯೊಂದಿಗೆ ನಿಷ್ಠೆಯಿಂದಲೂ ಅನುಸರಣೆಯಿಂದಲೂ ಸಂಬಂಧ ಸ್ಥಾಪಿಸಿ ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಹಾಗೆ ನಾವು ನಮ್ಮ ಗುರಿಗಳ ಕಡೆಗೆ ಪ್ರಯಾಣ ಜಾರಿಯಲ್ಲಿರಿಸಬಹುದಾಗಿದೆ. ನಾವು ಸತ್ಯಸಂಧ ಮುಸ್ಲಿಮನಾಗಬೇಕು. ಇಸ್ಲಾಮಿನ ಸಂದೇಶ ಲೋಕದಲ್ಲಿ ಹರಡಬೇಕು. ಆಯಾಕಾಲದ ಖಲೀಫರ ಕೈಯಲ್ಲಿ ಪ್ರತಿಯೊಬ್ಬ ಅಹ್ಮದಿ ಪ್ರತಿಜ್ಞೆ ಮಾಡುತ್ತಾನೆ. ಆದುದರಿಂದ ಖಲೀಫರೊಂದಿಗೆ ಮಾಡಿದ ಪ್ರತಿಜ್ಞೆ ಈಡೇರಿಸುವುದೂ ಆವಶ್ಯಕವಾಗಿದೆ. ಖಿಲಾಫತ್ ಕಡೆಯಿಂದ ಸಿಗುವ ಮಾರ್ಗದರ್ಶನಗಳನ್ನು, ಉಪದೇಶಗಳನ್ನು, ಕಾರ್ಯಕ್ರಮಸೂಚಿಯನ್ನು ಅನುಸರಿಸಿ ವರ್ತಿಸುವುದು ಈ ಪ್ರತಿಜ್ಞೆ ಈಡೇರಿಸುವ ರೀತಿಯಾಗಿದೆ.

ಬೈಅತ್ ಮಾಡುವಾಗ ಪ್ರತಿಯೊಬ್ಬ ಅಹ್ಮದಿ ಹೀಗೆ ಪ್ರತಿಜ್ಞೆ ಮಾಡುತ್ತಾನೆ: ಬೈಅತ್ ಶರತ್ತುಗಳನ್ನು ಪಾಲಿಸುವೆನು ಮತ್ತು ಆಯಾಕಾಲದ ಖಲೀಫರು ಮಾಡುವ ಒಳ್ಳೆಯ ತೀರ್ಮಾನಗಳನ್ನು ಪಾಲಿಸಲು ಬದ್ಧನಾಗುವೆನು ಎಂದು. ಆಯಾಕಾಲದ ಖಲೀಫರ ಕೆಲಸ ಸಹ ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೆಲಸವನ್ನು ಮತ್ತು ಉಪದೇಶಗಳನ್ನು ವಿಶಾಲವಾಗಿ ಹಬ್ಬಿಸುವುದಾಗಿರುತ್ತದೆ. ಮತ್ತು ಇಸ್ಲಾಮಿನ ಸಂದೇಶವನ್ನು ಲೋಕದ ಮೂಲೆ ಮೂಲೆಗಳಿಗೆ ಹಬ್ಬಿಸುವುದಾಗಿದೆ. ಪ್ರತಿಯೊಬ್ಬ ಅಹ್ಮದಿ ಈರೀತಿ ಯೋಚಿಸಿ ಕಾರ್ಯ ಪ್ರವೃತ್ತನಾಗುವಾಗ ವಾಸ್ತವಿಕ ಅನುಸರಣೆಯ ಉನ್ನತ ಮಟ್ಟವನ್ನು ಸ್ಥಾಪಿಸುವನು. ಆಗ ಮಾತ್ರ ಜಮಾಅತಿನ ಐಕ್ಯತೆ ನೆಲೆ ನಿಲ್ಲುವುದು. ಆಗ ಮಾತ್ರ ತಬ್ಲೀಗಿನ ಮೈದಾನಗಳು ತೆರೆಯಲ್ಪಡುವುವು. ಪ್ರತಿಯೊಬ್ಬ ಅಹ್ಮದಿ ನನಗೆ ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಭ್ರಾತೃ ಸಂಬಂಧ ಇದೆ ನಾನು ಅವರನ್ನು ಅನುಸರಿಸುತ್ತೇನೆ ಎಂದು ಕೇವಲ

ಹೇಳಿ, ತನ್ನದೇ ಮಾರ್ಗದಲ್ಲಿ ನಡೆಯುವುದಾದರೆ ಎಂದಿಗೂ ಅಭಿವೃದ್ಧಿ ಲಭಿಸಲಾರದು. ಅಹ್ಮದಿಯಾ ಜಮಾಅತಿನಲ್ಲಿ ಖಿಲಾಫತ್ ಇರುವುದು ಅದರ ಸೌಂದರ್ಯವಾಗಿದೆ. ಪ್ರತಿಯೊಬ್ಬ ಅಹ್ಮದಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಸಂಬಂಧವಿರುವುದು ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧರಾದ ಗುಲಾಮರಾಗಿರುವ ಕಾರಣದಿಂದಾಗಿದೆ. ಇದೇ ಸಂಬಂಧವನ್ನು ಖಿಲಾಫತ್‌ನೊಂದಿಗೆ ಇರಿಸುವುದು ಆವಶ್ಯಕವಾಗಿದೆ.

ಇಂದಿನ ಕಾಲದಲ್ಲಿ ಅಹ್ಮದಿಯರು ಅದೃಷ್ಟಶಾಲಿಗಳಾಗಿದ್ದಾರೆ. ಅಲ್ಲಾಹನು ಹೊಸ ಆವಿಷ್ಕಾರಗಳನ್ನು ಮತ್ತು ಸೌಲಭ್ಯಗಳನ್ನು ಸೃಷ್ಟಿಸಿದ್ದಾನೆ ಮತ್ತು ಅವುಗಳನ್ನು ಅಹ್ಮದಿಯರಿಗೂ ದಯಪಾಲಿಸಿದ್ದಾನೆ. ಧರ್ಮ ಪ್ರಚಾರ ಮಾಡಲು ಅಲ್ಲಾಹನು ಸೌಲಭ್ಯಗಳನ್ನು ಅಹ್ಮದಿಯಾ ಜಮಾಅತಿಗೆ ಒದಗಿಸಿದ್ದಾನೆ. ಟಿ.ವಿ., ಇಂಟರ್‌ನೆಟ್, ವೆಬ್‌ಸೈಟ್ ಮೊದಲಾದವುಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬರಹಗಳು ಲಭ್ಯವಿದೆ. ನಾವು ಇಚ್ಛಿಸುವುದಾದರೆ ಅವುಗಳಿಗೆ ತಲಪಬಲ್ಲೆವು. ಕೆಲವು ಮುಖ್ಯ ಭಾಷೆಗಳಲ್ಲಿ ಅವುಗಳ ಭಾಷಾಂತರ ಸಹ ಕಾಣಬಲ್ಲೆವು. ಮತ್ತು ಆಲಿಸಬಲ್ಲೆವು. ಅಲ್ಲಿ ಆಯಾಕಾಲದ ಖಲೀಫರ ಉಪದೇಶಗಳನ್ನೂ ಖುತ್‌ಬಗಳನ್ನೂ ಆಲಿಸಬಹುದು ಮತ್ತು ಓದಬಹುದು. ಪವಿತ್ರ ಖುರ್‌ಆನ್, ಹದೀಸ್ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳನ್ನು ಮೂಲಾಧಾರವಾಗಿಟ್ಟುಕೊಂಡು ಎಂ.ಟಿ.ಎ ಮೂಲಕ ಕಾರ್ಯಕ್ರಮಗಳು ಪ್ರಸಾರವಾಗುತ್ತಿವೆ. ಇದು ಲೋಕದ ಎಲ್ಲ ಸ್ಥಳಗಳಲ್ಲಿರುವ ಅಹ್ಮದಿಯರು ಐಕ್ಯತೆ ಹೊಂದಲು ಸಾಧ್ಯವಾದ ಹೊಸ ವಿಧಾನವಾಗಿದೆ. ಆದುದರಿಂದ ನೀವೆಲ್ಲರೂ ಈ ವಿಷಯಗಳ ಬಗ್ಗೆ ಲಕ್ಷ್ಯವಿಟ್ಟು ಎಂ.ಟಿ.ಎ.ದೊಂದಿಗೆ ನಿಮ್ಮ ಸಂಬಂಧ ಜೋಡಿಸಬೇಕು. ಮತ್ತು ನೀವು ಈ ಐಕ್ಯತೆಯ ಭಾಗವಾಗಬೇಕು. ಕನಿಷ್ಟ ಪ್ರತಿವಾರದ ಖುತ್‌ಬ ಆಲಿಸಲು ಶ್ರದ್ಧೆ ವಹಿಸಿರಿ. ತಮ್ಮ ಮನೆಗಳ ಸ್ಥಿತಿಯ ಬಗ್ಗೆ ಪರಿಶೋಧಿಸಿರಿ. ಮನೆಯಲ್ಲಿರುವ ಪ್ರತಿಯೊಬ್ಬ ವ್ಯಕ್ತಿ ಖುತ್‌ಬ ಆಲಿಸಿರುವನೋ ಇಲ್ಲವೋ ಎಂದು ಪರಿಶೋಧಿಸಿರಿ. ಪತ್ನಿ ಕೇಳುತ್ತಾ ಇದ್ದು ಪತಿ ಕೇಳದೆ ಇದ್ದರೆ ಪ್ರಯೋಜನ ಸಿಗಲಾರದು. ಅದೇರೀತಿ ತಂದೆ ಆಲಿಸುತ್ತಾರೆ ಆದರೆ ಪತ್ನಿ ಮತ್ತು ಮಕ್ಕಳು ಆಲಿಸದೆ ಇರುವುದಾದರೆ ಸಹ ಪ್ರಯೋಜನವಿಲ್ಲ. ಈ ವ್ಯವಸ್ಥೆ ಜಮಾಅತನ್ನು ಒಂದುಗೂಡಿಸಲು ಅಲ್ಲಾಹನು ಸೃಷ್ಟಿಸಿದ್ದಾಗಿದೆ. ಇದರ ಮೂಲಕ ಒಂದೇ ಸಮಯದಲ್ಲಿ ಲೋಕದ ಮೂಲೆ ಮೂಲೆಗಳಿಗೆ ಆಯಾಕಾಲದ ಖಲೀಫರ ಧ್ವನಿ ತಲಪುತ್ತದೆ. ಇದರ ಭಾಗವಾಗುವ ಆವಶ್ಯಕತೆ ಪ್ರತಿಯೊಬ್ಬ ಅಹ್ಮದಿಗೆ ಇದೆ. ಆದುದರಿಂದ ಇದರ ಬಗ್ಗೆ ಲಕ್ಷ್ಯ ನೀಡಿರಿ. ಖಲೀಫರು ಏನು ಹೇಳುತ್ತಾರೆಂದು ತಿಳಿಯದಿದ್ದರೆ ಅನುಸರಣೆ ಮಾಡುವುದಾದರೂ ಹೇಗೆ? ಉಪದೇಶಗಳನ್ನು ಆಲಿಸಿದರೆ ತಾನೆ ಅದನ್ನು ಅನುಸರಿಸಲು ಸಾಧ್ಯ. ಆದುದರಿಂದ ನೀವು ಅನುಸರಿಸಬೇಕಾದ ವಿಷಯ ಏನೆಂದು ಮೊದಲು ತಿಳಿದುಕೊಳ್ಳಿರಿ. ಪ್ರತಿಯೊಂದು ಮನೆಯವರು ಈ ವಿಷಯದ ಬಗ್ಗೆ ಶ್ರದ್ಧಿಸುವಂತೆ ಅಲ್ಲಾಹನು ಮಾಡಲಿ. ಅಲ್ಲಾಹನು ನಮ್ಮ ತರಬೇತಿಗೋಸ್ಕರ ಒದಗಿಸಿದ ಈ ಸೌಲಭ್ಯದಿಂದ ಧಾರಾಳ ಪ್ರಯೋಜನ ಪಡೆಯುವವರು ನಾವಾಗುವಂತೆ ಅಲ್ಲಾಹನು ಅನುಗ್ರಹ ನೀಡಲಿ. ತರಬೇತಿ ನೀಡುವುದು ಮಾತ್ರವಲ್ಲ ಇಸ್ಲಾಮಿನ ತತ್ವಗಳನ್ನು ವಿಶಾಲವಾಗಿ ಹರಡುವುದರಲ್ಲಿಯೂ ಎಂ.ಟಿ.ಎ ಬಹಳ ದೊಡ್ಡ ಕಾರ್ಯ ನಿರ್ವಹಿಸುತ್ತಾ ಇದೆ. ಏನಾದರೂ ಕಾರಣದಿಂದ ಲೈವ್ ಕಾರ್ಯಕ್ರಮಗಳನ್ನು ಆಲಿಸಲು ನಿಮಗೆ ಸಾಧ್ಯವಾಗದಿದ್ದರೆ ರಿಕಾರ್ಡ್ ಮಾಡಿದ ಕಾರ್ಯಕ್ರಮಗಳನ್ನು ಆಲಿಸಬಹುದಾಗಿದೆ. ಇಂಟರ್‌ನೆಟ್‌ನಲ್ಲಿಯೂ ಖುತ್‌ಬ ಇದೆ. ಮಾತ್ರವಲ್ಲ ಇತರ ಅನೇಕ ಕಾರ್ಯಕ್ರಮಗಳೂ ಲಭ್ಯವಿದೆ.

ನೀವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ವಿಶಿಷ್ಟ ಸಂಬಂಧ ಜೋಡಿಸುವವರಾಗುವುದರ ಜೊತೆಗೆ ಅನಂತರ ಜಾರಿಗೊಂಡ ಖಿಲಾಫತ್‌ನೊಂದಿಗೆ ಸಹ ಬಲಿಷ್ಠವಾದ ಸಂಬಂಧ ಸ್ಥಾಪಿಸುವವರೂ ಅನುಸರಣೆಯ ಮಾದರಿಯಾಗುವವರೂ ಆಗಲು ಅಲ್ಲಾಹನು ಎಲ್ಲರಿಗೂ ಭಾಗ್ಯ ನೀಡಲಿ. ಈ ಸಂಬಂಧ ಮತ್ತು ಅನುಸರಣೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹದೀಸು ಪ್ರಕಾರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಣೆ ಮಾಡಿ ಅಲ್ಲಾಹನ ಅನುಸರಣೆ ಮಾಡುತ್ತಾ ಅವನ ಸಂಪ್ರೀತಿಗಳಿಸುವಂತೆ ಮಾಡುವುದು. ಅಲ್ಲಾಹನು ಎಲ್ಲರಿಗೂ ಈ ಭಾಗ್ಯ ದಯಪಾಲಿಸಲಿ – ಆಮೀನ್.

(ಕೊನೆಗೆ ಹುಝೂರ್, ಜನಾಬ್ ಮುಹಮ್ಮದ್ ಇಖ್‌ಬಾಲ್ ವಡಾಯಿಚ್ 2–10–2015ರಂದು ನಿಧನ ಹೊಂದಿದ ಬಗ್ಗೆ ತಿಳಿಸಿ ಅವರ ಉತ್ತಮ ಗುಣಗಳನ್ನು ವಿವರಿಸಿದರು. ಮುರಬ್ಬಿ ಆಗಿದ್ದ ಅವರ ನಮಾಝ್ ಜನಾಝ ಗಾಯಿಬ್ ಅನುಷ್ಠಿಸುವುದಾಗಿ ಹೇಳಿದರು.)

––––––––––––––––*****––––––––––––––


***Friday Sermon delivered by Hadrath Khaleefatul Masih Al Khamis*** *(atba)*

*at Masjid BaithuNooru, Holand on 09-10-2015.*

**Summarized by** *Majlis Ansarullah Bharat*

***Kannada Translation***: M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon